ನಮ್ಮ ಸೋದರ ಸಂನ್ಯಾಸಿಗಳೊಬ್ಬರು ಅವರ ಭಾವವನ್ನು ಶ್ಲಾಘಿಸಿದರು. ಆಗ ಸ್ವಾಮಿ ಶಾರದಾನಂದರು ಜೋರಾಗಿ ಹೀಗೆ ಹೇಳಿದರು: "ಕೇವಲ ಭಾವ ಬರುವುದು ಆಧ್ಯಾತ್ಮಿಕ ಜೀವನದಲ್ಲಿ ಉನ್ನತ ಸ್ಥಿತಿಯನ್ನು ಮುಟ್ಟಿರುವುದರ ಸೂಚನೆಯಲ್ಲ. ಶುದ್ಧ ಚಾರಿತ್ರ್ಯ ಮಾತ್ರವೇ ಆಧ್ಯಾತ್ಮಿಕ ಜೀವನದ ತಳಹದಿ. ಶುದ್ಧಚಾರಿತ್ರ್ಯ ಇಲ್ಲದಿದ್ದರೆ, ಯಾರು ತಾನೆ ಭಾವದಲ್ಲಿ ಸ್ಥಿರವಾಗಿ ನಿಲ್ಲಲು ಸಾಧ್ಯ? ಶೀಲ ಶುದ್ಧವಾಗಿಲ್ಲದಿದ್ದರೆ ಭಾವದ ಸ್ಥಿತಿ ಹೆಚ್ಚುಕಾಲ ನಿಲ್ಲುವುದಿಲ್ಲ."

ಒಮ್ಮೆ ಬೇಲೂರು ಮಠದ ಹಿರಿಯ ಸಂನ್ಯಾಸಿಗಳು, ಯುವಕ ಸಂನ್ಯಾಸಿಯೊಬ್ಬನನ್ನು, ಅಶಿಸ್ತು ಮತ್ತು ದುರ್ನಡತೆಯ ಕಾರಣ ಸಂಘದಿಂದ ಹೊರಹಾಕಲು ನಿರ್ಧರಿಸಿದರು. ಆತ ಸೂಚನೆಯನ್ನು ಧಿಕ್ಕರಿಸಿ ಆಗಾಗ್ಗೆ ಆಶ್ರಮ ಬಿಟ್ಟು ಹೋಗುತ್ತಿದ್ದನು. ಶ್ರೀಮಂತರ ಮನೆಯಿಂದ ಬಂದಿದ್ದ ಆತ ಉನ್ನತ ವಿದ್ಯಾಭ್ಯಾಸವನ್ನು ಪಡೆದಿದ್ದ. ಈ ಹಿಂದೆ ದೊಡ್ಡ ಸರ್ಕಾರಿ ಹುದ್ದೆಯಲ್ಲಿಯೂ ಇದ್ದ. ನೋಡಲು ಚೆನ್ನಾಗಿದ್ದ; ಇಂಪಾದ ಕಂಠದಿಂದ ಹಾಡುತ್ತಿದ್ದ. ಆತ ಮಠ ಸೇರಿದ ಹೊಸದರಲ್ಲಿ ಎಲ್ಲರ ಪ್ರೀತಿಗೆ ಪಾತ್ರನಾಗಿದ್ದ. ಕ್ರಮೇಣ ಅವನಲ್ಲಿ ದೌರ್ಬಲ್ಯಗಳು ಕಾಣಿಸಿಕೊಂಡುವು. ಮಠದ ಸಾಧಾರಣ ಊಟ, ಉಡುಪು, ಶ್ರಮದ ಕೆಲಸ ಮತ್ತು ಶಿಸ್ತು ಆತನಿಗೆ ಇಷ್ಟವಾಗಲಿಲ್ಲ. ಹೊರಗೆ ಹೋಗಿ ಶ್ರೀಮಂತ ಗೃಹಸ್ಥಭಕ್ತರ ಮನೆಯಲ್ಲಿ ಊಟ ಮಾಡುತ್ತಿದ್ದ. ಹೊರಗಿನ ಜನರ ಸಂಗವಿತ್ತು. ಮಠದ ಹಿರಿಯ ಸಂನ್ಯಾಸಿಗಳು ಅನೇಕ ಬಾರಿ ಎಚ್ಚರಿಸಿದರೂ ಆತ ಅವರ ಮಾತನ್ನು ಕೇಳಲಿಲ್ಲ. ಹೀಗಾಗಿ ಆತನನ್ನು ಮಠದಿಂದ ಕಳುಹಿಸಿಬಿಡಬೇಕೆಂದು ಅವರೆಲ್ಲ ತೀರ್ಮಾನಿಸಿದರು. ಇದಕ್ಕೆ ಸ್ವಾಮಿ ಶಾರದಾನಂದರ ಅನುಮತಿ ಅವಶ್ಯವಾಗಿತ್ತು. ಆತನನ್ನು ಸ್ವಾಮಿಗಳ ಮುಂದೆ ಕರೆದುಕೊಂಡು ಹೋದರು. ಆಗ ಅಲ್ಲಿ ನಾನೂ ಇದ್ದೆ. ಎಲ್ಲವನ್ನೂ ಕೇಳಿಸಿಕೊಂಡು ಅವನೆಡೆ ನೋಡುತ್ತಿದ್ದ ಸ್ವಾಮಿಗಳ ಮನಸ್ಸು ಮರುಗಿತು. ಅವರ ಹೃದಯ ಕರುಣೆಯಿಂದ ಕರಗಿತು. ಗದ್ಗದಕಂಠದಿಂದ, ತಾಯಿಯಂತೆ ಬಹಳ ಪ್ರೀತಿಯಿಂದ ಮೃದುಸ್ವರದಲ್ಲಿ ಹೇಳಿದರು: "ನೀನು ನನ್ನೊಡನೆ ಇರು, ಮಗು. ನೀನು ಎಲ್ಲಿಗೆ ತಾನೇ ಹೋಗುವೆ? ಮತ್ತೆಲ್ಲಿಗೆ ಹೋಗುವೆ? ನನ್ನ ಬಳಿ ಇರು! ನಾನು ನಿನಗೆ ಎಲ್ಲ ಸೌಕರ್ಯಗಳನ್ನೂ ಒದಗಿಸುತ್ತೇನೆ, ಎಲ್ಲವನ್ನೂ ಕೊಡುತ್ತೇನೆ. ಇನ್ನು ನೀನು ಎಲ್ಲಿಯೂ ಹೋಗಬೇಕಾದ ಆವಶ್ಯಕತೆ ಇಲ್ಲ." ತಪ್ಪು ಮಾಡಿದ ಸಂನ್ಯಾಸಿಯ ಕ್ಷೇಮಕ್ಕಾಗಿ ಅವರು ತೋರಿದ ಪ್ರೀತಿ, ಕಾತುರತೆ, ತಮ್ಮ ಹತ್ತಿರ ಇಟ್ಟುಕೊಂಡು ಅವನನ್ನು ತಿದ್ದಲು ಮಾಡಿದ ಪ್ರಯತ್ನ – ಇವೆಲ್ಲವನ್ನೂ ನೋಡಿ, 'ಯಾರಾದರೂ ಇಷ್ಟೊಂದು ದಯೆ ಮತ್ತು ಕಾರುಣ್ಯದಿಂದ ಕೂಡಿರಲು ಸಾಧ್ಯವೆ' ಎಂದು ಅಚ್ಚರಿಪಟ್ಟೆ.

ಸ್ವಾಮಿ ಶಾರದಾನಂದರು, ಶಾಸ್ತ್ರವ್ಯಾಸಂಗ ಮತ್ತು ಆಧ್ಯಾತ್ಮಿಕ ಸಾಧನೆಗಳನ್ನು ಮಾಡುವುದಕ್ಕೆ ನನ್ನನ್ನು ಪ್ರೋತ್ಸಾಹಿಸಿದರು. ಅಲ್ಲದೆ ಅದಕ್ಕೆ ಸೂಕ್ತ ಸಲಹೆಗಳನ್ನೂ ಕೊಟ್ಟರು. "ನಿನ್ನ ಸುಖ, ಸಂತೋಷಕ್ಕಾಗಿ ಮಾಡುವ ಕೆಲಸಗಳೆಲ್ಲವೂ ನಿನ್ನ ಬಂಧನಕ್ಕೆ ಕಾರಣವಾಗುತ್ತವೆ. ಆದರೆ ಇತರರ ಅನುಕೂಲ ಮತ್ತು ಸಂತೋಷಕ್ಕಾಗಿ ಮಾಡುವುದೆಲ್ಲವೂ ನಿನ್ನನ್ನು ಮುಕ್ತಿಮಾರ್ಗಕ್ಕೆ ಕರೆದೊಯ್ಯುತ್ತವೆ" ಎಂದು ಹೇಳುತ್ತ ನೆರವು ಬೇಕಾದವರಿಗೆ ಸೇವೆ ಮಾಡುವಂತೆ ನನ್ನನ್ನು ಪ್ರೋತ್ಸಾಹಿಸಿದರು. ಕಷ್ಟದಲ್ಲಿರುವವರಿಗೆ ಸೇವೆ ಮಾಡುವುದಕ್ಕಾಗಿ ಅವರು, ತಮ್ಮ ಅನುಕೂಲತೆಗಳನ್ನು ಮರೆತು, ಕೆಲವು ವೇಳೆ ತಮ್ಮ ಆರೋಗ್ಯಕ್ಕೆ ತೊಂದರೆಯಾದರೂ ಶ್ರಮಿಸುತ್ತಿದ್ದುದನ್ನು ನಾನು ಹಲವಾರು ಬಾರಿ ನೋಡಿದ್ದೇನೆ.

ನನ್ನ ಆಧ್ಯಾತ್ಮಿಕ ಸಾಧನೆಯ ಪ್ರಾರಂಭದಲ್ಲಿ ಒಮ್ಮೆ ನಾನು ಸಾಧನೆಯ ವಿಷಯವಾಗಿ ಅವರ ಸಲಹೆಯನ್ನು ಕೇಳಿದೆನು: ನನ್ನ ಮನಸ್ಸನ್ನು ಯಾವುದರ ಮೇಲೆ ಕೇಂದ್ರೀಕರಿಸುವುದು ಒಳ್ಳೆಯದು – ಭಗವಂತನ ಆಕಾರದ ಮೇಲೋ ಅಥವಾ ಜ್ಞಾನಮಾರ್ಗದ ಮೇಲೋ (ಆತ್ಮತತ್ತ್ವ ಮತ್ತು ಸಿದ್ಧಾಂತಗಳ ಮೇಲೋ) ಎಂದು. ಅವರು ಪ್ರೀತಿಯಿಂದ ಹೇಳಿದರು, "ವಿವೇಕ ಮತ್ತು ಆತ್ಮವಿಮರ್ಶೆಗಳೇ ನಿನಗೆ ಒಳ್ಳೆಯದು."

ಮತ್ತೊಂದು ಸಂದರ್ಭದಲ್ಲಿ ನಾನು, 'ಭಗವದ್ದರ್ಶನದ ಮೂಲಕ ಸಾಕ್ಷಾತ್ಕಾರ' ಎಂಬುದರ ನಿಜವಾದ ಅರ್ಥವೇನು ಎಂದು ಅವರನ್ನು ಕೇಳಿದೆನು. ಭಗವಂತನನ್ನು ಸ್ಥೂಲ ಕಣ್ಣುಗಳಿಂದ ನೋಡುವುದೇ ಅಥವಾ ನಮ್ಮ ಅಂತರಂಗದಲ್ಲಿ ನೋಡುವುದೇ ಎನ್ನುವುದೇ ನನ್ನ ಸಂದೇಹವಾಗಿತ್ತು. ಅದನ್ನು ಸ್ವಾಮಿಗಳು ಹೀಗೆ ವಿವರಿಸಿದರು:

"ಭಗವದ್ದರ್ಶನವೆಂದರೆ ನಮ್ಮ ಅಂತರಾತ್ಮನನ್ನು ನೋಡುವುದು, ಸಾಕ್ಷಾತ್ಕರಿಸಿಕೊಳ್ಳುವುದು. ಸಾಮಾನ್ಯವಾಗಿ ಯಾವುದನ್ನು ನಮ್ಮ ಕಣ್ಣುಗಳ ಮೂಲಕ ನೋಡುವೆವೋ, ಕಿವಿಗಳ ಮೂಲಕ ಕೇಳುವೆವೊ ಅದು ನಿಜವಾಗಿಯೂ ಇರುವುದು ಎಂದು ನಾವು ನಂಬುವೆವು. ಯಾವುದನ್ನು ನಮ್ಮ ಅಂತರಾಳದಲ್ಲಿ ನೋಡುವೆವೊ, ಅದು ಇದಕ್ಕಿಂತ ಹೆಚ್ಚು ಶಾಶ್ವತ ಸತ್ಯ ಎಂದು ಅನುಭವಕ್ಕೆ ಬರುತ್ತದೆ. ಅದೇ ಸಾಕ್ಷಾತ್ಕಾರ – ಭಗವದ್ದರ್ಶನ."

ಒಮ್ಮೆ ನಾನು ವಿರಾಮಕಾಲದಲ್ಲಿ ಹರಟುತ್ತ, ವ್ಯರ್ಥ ಕೆಲಸಗಳನ್ನು ಮಾಡುತ್ತಿದ್ದೆನು. ಕಾಲ ಸಿಕ್ಕಾಗ ಶ್ರೀಮದ್ಭಾಗವತವನ್ನು ಓದಲು ಉಪಯೋಗಿಸಬೇಕೆಂದೂ, ಕಾಲವನ್ನು ಪೋಲು ಮಾಡಬಾರದೆಂದೂ ಸ್ವಾಮಿ ಶಾರದಾನಂದರು ನನ್ನನ್ನು ಎಚ್ಚರಿಸಿದರು.

ಅವರ ಬುದ್ಧಿವಾದದಂತೆ ಶ್ರೀಮದ್ಭಾಗವತವನ್ನು ಶ್ರದ್ಧೆಯಿಂದ ಅಧ್ಯಯನ ಮಾಡಿ, ಅದರ ಪ್ರಯೋಜನವನ್ನು ಧಾರಾಳವಾಗಿ ಪಡೆದುಕೊಂಡೆನು. ಸ್ಪಷ್ಟವಾಗಿ ತಿಳಿಯದ ಅನೇಕ ಧಾರ್ಮಿಕ ತತ್ತ್ವಗಳು ಇದರಿಂದ ನನಗೆ ಅರ್ಥವಾದುವು. ಹೀಗಾಗಿ ನನ್ನ ಜೀವನದ ಕೊನೆಯ ಕಾಲದಲ್ಲಿಯೂ ಶ್ರೀಮದ್ಭಾಗವತವೇ ನನ್ನ ಸಂಗಾತಿಯಾಗಿದೆ ಮತ್ತು ನಿತ್ಯವಾದ ಸಮಾಧಾನವನ್ನು ತಂದುಕೊಡುವ ಸ್ನೇಹಿತನಾಗಿದೆ.



ಇಂದು ಪರಿಸರ ಮಾಲಿನ್ಯವು ಬಹಳ ಕಳವಳ ತರುವ ವಿಷಯವಾಗಿದೆ. ಮಾನವನ ಭೋಗಲಾಲಸೆಯ ಜೀವನಶೈಲಿಯು ಪ್ರಕೃತಿಯ ವಿನಾಶಕ್ಕೆ ಕಾರಣವಾಗಿದೆ. ಈ ಅಂಶವನ್ನು ಬಹಳ ಪರಿಣಾಮಕಾರಿಯಾಗಿ ಮತ್ತು ಮನೋಜ್ಞವಾಗಿ ಬಣ್ಣಿಸಿರುವ ಲೇಖಕರು ಹಾವೇರಿ ಜಿಲ್ಲೆ, ಹಾನಗಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

**ಟಿಪ್ಪುಸುಲ್ತಾನ ಜೆ. ನಾಯ್ಕವಾಡಿ**

# ಪ್ರಕೃತಿ ಮಾತೆಯ ಕಗ್ಗೊಲೆ !

ಪ್ರಕೃತಿಯೊಂದು ಸುಂದರ ಸ್ವರ್ಗ. ಅದು ನಮಗೆ ದೇವರು ಕೊಟ್ಟ ಕೊಡುಗೆ. ಮಾನವ ಇಂದು ಹಕ್ಕಿಯಂತೆ ಹಾರುವುದನ್ನು ಕಲಿತಿದ್ದಾನೆ; ನೀರಿನಲ್ಲಿ ಮೀನಿನಂತೆ ಈಜುವುದನ್ನು ಕಲಿತಿದ್ದಾನೆ. ಆದರೆ ಭೂಮಿಯ ಮೇಲೆ ಮಾನವನಾಗಿರುವುದನ್ನು ಕಲಿಯಲಿಲ್ಲ ಎಂಬುದು ವಿಪರ್ಯಾಸ. ಆಧುನೀಕರಣ, ಕೈಗಾರಿಕೀಕರಣ, ನಗರೀಕರಣದ ಭರಾಟೆಯಲ್ಲಿ ಸ್ವಾರ್ಥಿ ಮಾನವ ಇಂದು, ತನಗೆ ತಿಳಿದೋ ಅಥವಾ ತಿಳಿಯದೆಯೋ, ಪ್ರಕೃತಿ ಮಾತೆಯನ್ನು ಸಾವಿನ ದವಡೆಗೆ ನೂಕುತ್ತಿದ್ದಾನೆ. ಅಭಿವೃದ್ಧಿಯೆಂಬ ಮಾಯಾ ಜಿಂಕೆಯನ್ನು ಬೆನ್ನುಹತ್ತಿರುವ ಈತ ಕಾಡನ್ನು ಕಾಂಕ್ರಿಟ್ ನಾಡಾಗಿ ಪರಿವರ್ತಿಸಿದ್ದಾನೆ; ಹಾಡುಹಗಲೇ ಮರಗಳ ಮಾರಣ ಹೋಮ ಮಾಡುತ್ತಿದ್ದಾನೆ. ತಂಪನ್ನು ಧಾರೆಯೆರೆಯುವ ಮುಗಿಲೆತ್ತರದ, ವಿಶಾಲವಾದ ಮರಗಳ ಜಾಗದಲ್ಲಿ ಇಂದು ಮುಗಿಲೆತ್ತರದ ಗಗನಚುಂಬಿ ಕಟ್ಟಡಗಳು, ಬೃಹತ್ ಸ್ಥಾವರಗಳು ರಾರಾಜಿಸುತ್ತಿವೆ. ಅವುಗಳ ಪಕ್ಕದಲ್ಲಿ ದಟ್ಟವಾದ ಕಾರ್ಬನ್ ಹೊಗೆ ಕಾರುತ್ತಿರುವ ಕಾರ್ಖಾನೆಗಳು, ಈತನ್ಮಧ್ಯೆ ವಾಹನಗಳ ರುದ್ರ ನರ್ತನದ ಕರ್ಕಶ ಶಬ್ದದ ಅಬ್ಬರ. ಇವುಗಳನ್ನು ಅಭಿವೃದ್ಧಿಯ ಸಂಕೇತಗಳೆನ್ನಬೇಕೋ ಅಥವಾ ಮಾನವನ ವಿನಾಶಸೂಚಕ ಸಂಕೇತಗಳೆನ್ನಬೇಕೋ ಎಂಬುದು ಗೊಂದಲಮಯ. ಒಟ್ಟಿನಲ್ಲಿ ಮಾನವ ತನ್ನ ಕಾಲಿಗೆ ತಾನೇ ಕೊಡಲಿಯನ್ನು ಹಾಕಿಕೊಳ್ಳುತ್ತ, ತನ್ನ ಭವಿಷ್ಯದ ಗೋರಿಯನ್ನು ಈಗಲೇ ತಾನೇ ತೋಡಿಕೊಳ್ಳುತ್ತಿರುವ ಸತ್ಯವನ್ನಂತೂ ಮರೆಮಾಚುವಂತಿಲ್ಲ.

**ಬೆಳಗಾಗ ನಾನೆದ್ದು ಯಾರ್ಯಾರ ನೆನೆಯಾಲಿ**
**ಎಳ್ಳುಜೀರಿಗೆ ಬೆಳೆಯೋಳ । ಭೂಮ್ತಾಯ**
**ಎದ್ದೊಂದು ಗಳಿಗೆ ನೆನೆದೇನ**

ಹಿಂದೆ ಜನಪದರ ಕಾಲವೊಂದಿತ್ತು, ಅವರಲ್ಲಿ ಅದೆಂತಹ ಪರಿಸರ ಪ್ರೇಮ! ಪರಿಸರದ ಜೊತೆಗೆ ಅದೆಂತಹ ನಿಕಟತೆ! ಅವರ ದೈನಂದಿನ ಚಟುವಟಿಕೆಗಳು ಪ್ರಕೃತಿತಾಯಿಯನ್ನು ನಮಿಸುವ ಮೂಲಕವೇ ಪ್ರಾರಂಭವಾಗುತ್ತಿದ್ದವು. ಪರಿಸರವನ್ನು ಮನಬಂದಂತೆ ಮಲಿನ ಮಾಡುತ್ತಿರುವ ಮಾನವನಿಗೆ, ಆದರ್ಶ ಜೀವನ ನಡೆಸುವುದಕ್ಕೆ ಈ ಜನಪದರೇ ಮಾದರಿ ಎಂದರೆ ತಪ್ಪಾಗಲಾರದು.

ಭೂಮಿ ಇಂದು ಕುದಿಯುತ್ತಿದೆ; ಜಾಗತಿಕ ತಾಪಮಾನ ಮಿತಿ ಮೀರಿದೆ; ಪ್ರಕೃತಿ ತಾಯಿಯ ಒಡಲು ಬರಿದಾಗತೊಡಗಿದೆ. ಕನ್ನಡ ಸಾಹಿತ್ಯದ ಖ್ಯಾತ ವಿಮರ್ಶಕರಾದ ಡಾ. ವಿ. ಚಂದ್ರಶೇಖರ ನಂಗಲಿಯವರು, **'ನೀರು: ಭೂಮಿ ತಾಯಿಯ ಎದೆ ಹಾಲು'** ಎಂದು ನೀರನ್ನು ಭೂಮಿ ತಾಯಿಯ ಎದೆಹಾಲಿನೊಂದಿಗೆ ಸಮೀಕರಿಸಿರುವುದು ಅದ್ಭುತ. ಅವರ ಈ ಮಾತಿನಲ್ಲಿ ನಾವು ಪ್ರಸಕ್ತ ವಿದ್ಯಮಾನದಲ್ಲಿ ನೀರಿಗೆ ಎಷ್ಟು ಮಹತ್ವ ಇದೆ ಎನ್ನುವುದನ್ನು ಅರಿತುಕೊಳ್ಳಬಹುದು. ಆದರೆ ಇಂದು ಮಾನವ ತನ್ನ ಸ್ವಾರ್ಥಪ್ರೇರಿತ ಕೃತ್ಯದಿಂದಾಗಿ, ಎಲ್ಲಿ ಬೇಕಾದಲ್ಲಿ ಗಣಿಗಳನ್ನು ಕೊರೆದು, ಆ ಎದೆಹಾಲನ್ನು ಹಾಳುಗೆಡುವುತ್ತಿರುವುದು ಭವಿಷ್ಯದ ದುರಂತಸೂಚಕವಾಗಿದೆ. ಕ್ಯೂಬಾ ದೇಶದ ಫೀಡೆಲ್ ಕ್ಯಾಸ್ಟ್ರೋ, "ಭಾರತದಲ್ಲಿ ನೀರಿನ ಅಪವ್ಯಯ ಹೀಗೇ ಮುಂದುವರೆಯುತ್ತಿದ್ದಲ್ಲಿ ಮುಂದೊಂದು ದಿನ ಅದು ನೀರಿನ ಹಾಹಾಕಾರವನ್ನು ಎದುರಿಸುತ್ತದೆ" ಎಂದು ಎಚ್ಚರಿಸಿರುವುದು ಗಮನಾರ್ಹ. ವಿಶ್ವಸಂಸ್ಥೆಯ ವರದಿಯೊಂದು, ಇದೇ ರೀತಿ ಕೊಳವೆಬಾವಿಗಳನ್ನು ತೋಡುತ್ತ ಹೋದರೆ, ಭಾರತವು ೨೦೨೫ ರ ವೇಳೆಗೆ ತನ್ನ ಅಂತರ್ಜಲದ ಮಟ್ಟವನ್ನು ಕಳೆದುಕೊಳ್ಳಲಿದೆ ಎಂಬ ಆತಂಕವನ್ನು ವ್ಯಕ್ತಪಡಿಸಿದೆ.

ವಿಶ್ವಸಂಸ್ಥೆಯ ನಿಯೋಗವೊಂದು ಜಾಗತಿಕ ತಾಪಮಾನದ ಬದಲಾವಣೆ ಕುರಿತು ವರದಿಯನ್ನು ಸಿದ್ಧಪಡಿಸಿದೆ. ಅದರಲ್ಲಿ ಈ ರೀತಿ ಹೇಳಲಾಗಿದೆ: "We are facing global crisis; if we continue to generate green house gases, we will sink without a trace." ("ನಾವೀಗ ಜಾಗತಿಕ ಸಂಕಷ್ಟವನ್ನು ಎದುರಿಸುತ್ತಿದ್ದೇವೆ. ನಾವು 'ಹಸಿರುಮನೆ'ಯ ಅನಿಲಗಳನ್ನು ಇದೇ ರೀತಿ ಉತ್ಪಾದಿಸುತ್ತ ಹೋದರೆ, ಗುರುತೇ ಇರದ ಹಾಗೆ ನಾಶವಾಗಿ ಹೋಗುತ್ತೇವೆ.") ಈ ವರದಿಯ ಧ್ವನಿಯನ್ನು ಗಮನಿಸಿದರೆ ಪರಿಸರವನ್ನು ಮನಬಂದಂತೆ ಹಾಳು ಮಾಡುತ್ತಿರುವ ಎಂತಹ ಕಟುಕನ ಕಲ್ಲುಹೃದಯದಲ್ಲೂ ದಿಗಿಲು

ಭುಗಿಲಂತೆ ಹುಟ್ಟಿ ಕರುಣೆಯ ಬುಗ್ಗೆ ಚಿಮ್ಮಲೇಬೇಕು. ಮಾನವ ಎಷ್ಟೆಷ್ಟು ಮುಂಚೂಣಿಯಲ್ಲಿ ಅಭಿವೃದ್ಧಿ ಸಾಧಿಸುತ್ತಿದ್ದಾನೆಯೋ ಅಷ್ಟಷ್ಟೇ ತನ್ನ ಆಯುಸ್ಸನ್ನು ಕಡಿಮೆ ಮಾಡಿಕೊಳ್ಳುತ್ತಿದ್ದಾನೆ ಎಂದರೆ ತಪ್ಪಾಗಲಾರದು. ನಮ್ಮ ಪೂರ್ವಜರು ಬಹುತೇಕ ಶತಾಯುಷಿಗಳೇ ಆಗಿದ್ದರು. ಅವರು ಅಷ್ಟು ದೀರ್ಘವಾಗಿ ಜೀವಿಸಲು ಕಾರಣವಾದರೂ ಏನೆಂದು ಪ್ರಶ್ನಿಸಿದಾಗ, ನಮ್ಮ ಸಮಾಜದ ಕೆಲ ದೀರ್ಘಾಯುಷಿಗಳಿಂದ ಬರುವಂತಹ ಉತ್ತರ ಒಂದೇ: 'ಅವರು ಬಹಳ ಪುಣ್ಯದ ಕೆಲಸ ಮಾಡ್ತಿದ್ರು.' ಹಾಗೆಂದುಕೊಂಡರೆ ಅದು ನಮ್ಮ 'ಸಾಂಸ್ಕೃತಿಕ ಮೌಢ್ಯ' ಎನ್ನಬೇಕಾಗುತ್ತದೆ. ಅಷ್ಟಕ್ಕೂ ಅವರನ್ನು ಪುನಃ ಪ್ರಶ್ನಿಸಿ, " ಹಾಗಾದರೆ, ನಾವೇನು ಪಾಪಿಗಳಾ" ಎಂದರೆ, "ಹೌದು, ನೀವು ಪಾಪಿಗಳು. ಪ್ರಕೃತಿಯನ್ನು ಕಗ್ಗೊಲೆ ಮಾಡುತ್ತಿರುವ ಕಟುಕರು" ಎಂಬ ಉತ್ತರ ದೊರೆಯಿತು. ಇಷ್ಟಾದ ಮೇಲೆ ಮತ್ತೆ ತುಟಿಬಿಚ್ಚುವ ಧೈರ್ಯ ನನ್ನಲ್ಲಿರಲಿಲ್ಲ.

ನಮ್ಮ ವಾತಾವರಣದಲ್ಲಿ ಕಾರ್ಬನ್ ಡೈ ಆಕ್ಸೈಡ್‌ನ ಪ್ರಮಾಣವು ೧೯೮೦ ರಲ್ಲಿ ಶೇ. ೦.೦೩೫ ರಷ್ಟಿದ್ದು, ೨೦೧೨ ರಲ್ಲಿ ಶೇ. ೦.೦೪೯ ರಷ್ಟಾಗಿದೆ. ಅದು ೨೧ ನೇ ಶತಮಾನದ ಮಧ್ಯಭಾಗದಲ್ಲಿ ಶೇ. ೦.೦೫೫ ರಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ. ವಿಶ್ವಮಟ್ಟದಲ್ಲಿ ಕಾರ್ಬನ್ ಡೈ ಆಕ್ಸೈಡ್ ($CO_2$) ಹೊರಸೂಸುವಿಕೆಯ EPA ವರದಿಯ (೨೦೦೮) ಪ್ರಕಾರ, ಭಾರತ ಮಾತ್ರವೇ ಪ್ರತಿವರ್ಷ ಜಗತ್ತಿಗೆ ೬% ಅಷ್ಟು $CO_2$ ಬಿಡುಗಡೆ ಮಾಡುತ್ತಿದ್ದು, ಕಾರ್ಬನ್ ಹೊರಸೂಸುವಿಕೆಯಲ್ಲಿ ವಿಶ್ವದಲ್ಲಿ ನಾಲ್ಕನೆಯ ಸ್ಥಾನದಲ್ಲಿದೆ. ಆದರೆ ಮುಂದುವರಿದ ದೇಶಗಳ ಪಾತ್ರ ಇನ್ನೂ ಹೆಚ್ಚು. ಉದಾಹರಣೆಗೆ ಚೀನಾ ೨೩% ರಷ್ಟು $CO_2$ ಬಿಡುಗಡೆ ಮಾಡುತ್ತಿದ್ದು, ಪ್ರಥಮ ಸ್ಥಾನದಲ್ಲಿದೆ. ಅಮೆರಿಕಾ ೧೯.೫% ಬಿಡುಗಡೆ ಮಾಡುತ್ತಿದ್ದು, ದ್ವಿತೀಯ ಸ್ಥಾನದಲ್ಲಿದೆ. ವಾಹನಗಳು ಉಗುಳುವ ಹೊಗೆಯ ಪ್ರಮಾಣದ ಸಮೀಕ್ಷೆಯೊಂದರ ಪ್ರಕಾರ ವಾಹನಗಳ ಹೊಗೆಯೇ ಶೇ. ೬೫ ರಷ್ಟು ವಾಯುಮಾಲಿನ್ಯಕ್ಕೆ ಕಾರಣವಾಗುತ್ತಿದೆ ಎಂದು ತಿಳಿದು ಬಂದಿದೆ. ವಾಯುಮಾಲಿನ್ಯವನ್ನು ಉಂಟುಮಾಡುವ ಮಲಿನ ಕಾರಕಗಳಲ್ಲಿ ಕಾರ್ಬನ್ ಮಾನಾಕ್ಸೈಡ್ ಪ್ರಮುಖವಾದದ್ದು. ವಾಹನಗಳು ಉಗುಳುವ ಹೊಗೆ ಇದರ ಪ್ರಮುಖ ಆಕರ.





ಕೈಗಾರಿಕೆಗಳು ಹೊರಸೂಸುವ ಕೆಲವು ಮಲಿನಕಾರಕಗಳ ತೀವ್ರತೆಯಿಂದಾಗಿ ಇಂದು ಆಮ್ಲೀಯ ಮಳೆ ಉಂಟಾಗುತ್ತಿದ್ದು, ಇದು ಭೂತಾಯಿಯ ಸಾರವನ್ನು ಕಡಿಮೆ ಮಾಡುತ್ತಿದೆಯಲ್ಲದೆ, ಬೆಳೆದ ಬೆಳೆಯ ಹಾನಿ ಹಾಗೂ ಜಗತ್ಪ್ರಸಿದ್ಧ ಸ್ಮಾರಕಗಳು ಬಣ್ಣ ಕಳೆದುಕೊಳ್ಳಲು ಕಾರಣವಾಗಿದೆ. ಜಗತ್ತಿನ ಏಳು ಅದ್ಭುತಗಳಲ್ಲಿ ಒಂದಾಗಿರುವ ತಾಜ್‌ಮಹಲ್‌ನ ಬಣ್ಣ ಬದಲಾಗುತ್ತಿರುವುದಕ್ಕೆ ಈ ಆಮ್ಲೀಯ ಮಳೆಯೇ ಕಾರಣ. ಆದರೆ ಕಾರ್ಬನ್ ಡೈ ಆಕ್ಸೈಡ್‌ನ್ನು ತೆಗೆದುಕೊಂಡು ಆಮ್ಲಜನಕ ಬಿಡುಗಡೆ ಮಾಡಿ, ನಮ್ಮ ಮೇಲೆ ಕರುಣೆ ತೋರುತ್ತಿರುವ ಮರಗಳನ್ನು ನಾವು ಕಡಿದುಹಾಕುತ್ತಿರುವುದು ದುರಂತವೇ ಸರಿ.

ನಾವೆಲ್ಲರೂ ಉಪಯೋಗಿಸುತ್ತಿರುವ ರೆಫ್ರಿಜರೇಟರ್‌ಗಳಿಂದ ಬಿಡುಗಡೆಯಾಗುತ್ತಿರುವ ಕ್ಲೋರೋಫ್ಲೋರೋ ಕಾರ್ಬನ್ (CFC) ಮತ್ತು ಕೈಗಾರಿಕೆಗಳಲ್ಲಿ ಉಪಯೋಗಿಸುತ್ತಿರುವ ಕೆಲವು ರಾಸಾಯನಿಕಗಳಿಂದ 'ಸೌರ ಕೊಡೆ' ಅಂದರೆ ಓಝೋನ್ ($O_3$) ಪದರ ನಾಶವಾಗುತ್ತಿದೆ. ಈ ರಾಸಾಯನಿಕಗಳು ವಾಯುಮಂಡಲಕ್ಕೆ ಕ್ಲೋರೀನ್ ಅಣುಗಳನ್ನು ಬಿಡುಗಡೆ ಮಾಡುತ್ತವೆ. ಒಂದು ಕ್ಲೋರಿನ್ ಪರಮಾಣು ೧ ಲಕ್ಷ ಓಜೋನ್ ಅಣುಗಳನ್ನು ನಾಶ ಮಾಡುತ್ತದೆ. ಇದರ ಪರಿಣಾಮವಾಗಿ ಇಂದು ನಮ್ಮ ಓಜೋನ್ ಪದರ ಶಿಥಿಲವಾಗಿದ್ದು, ಅದರಿಂದ ತೀಕ್ಷ್ಣವಾದ ಸೂರ್ಯನ ಕಿರಣಗಳು ಭೂಮಿಗೆ ನೇರವಾಗಿ ತಾಕುತ್ತಿವೆ. ಈ ಕಿರಣಗಳು ಮನುಷ್ಯನ ಮೈಗೆ ಸ್ಪರ್ಶಿಸುವುದರಿಂದ ಇಂದು ಆತ ಹಲವಾರು ಭಯಾನಕ ರೋಗಗಳಿಗೆ ತುತ್ತಾಗುತ್ತಿದ್ದಾನೆ. ಇದರಿಂದ ಭೂಮಿಯ ತಾಪಮಾನದ ಏರಿಕೆಯಾಗುತ್ತಿದ್ದು, ಹಿಮಪಾತ ಉಂಟಾಗಿ ಸಮುದ್ರದ ನೀರಿನ ಮಟ್ಟ ಏರುವುದಕ್ಕೂ ಕಾರಣವಾಗುತ್ತಿದೆ. ಈ ಪ್ರಕ್ರಿಯೆ ಹೀಗೆಯೇ ಮುಂದುವರೆದರೆ ಜಗತ್ತಿನ ಅಂತ್ಯ ಬಹು ದೂರವೇನಿಲ್ಲ.



ಸುಮಾರು ಆರು ದಶಕಗಳ ಹಿಂದೆ ಭಯಾನಕವಾದ ಎರಡನೇ ಮಹಾಯುದ್ಧ ಜರುಗಿತು. ಯುದ್ಧ ಉಂಟುಮಾಡಿದ ಈ ಭಯೋತ್ಪಾದನೆ ಜನರ ಮನಸ್ಸಿನಲ್ಲಿ ದಿಗಿಲನ್ನು ಹುಟ್ಟಿಸಿತ್ತು. ಇದ್ದಕ್ಕಿದ್ದಂತೆ ೧೯೪೫, ಅಗಸ್ಟ್ ೬ರ ಬೆಳಗಿನ ಜಾವ ಅಮೇರಿಕ ದಿಂದ ಜವರಾಯನನ್ನು ಹೊತ್ತು ತಂದ ಯುದ್ಧವಿಮಾನಗಳು ಜಪಾನಿನ ಸುಂದರ ನಗರಗಳಾದ ಹಿರೋಷಿಮಾ ಮತ್ತು ನಾಗಾಸಾಕಿಗಳ ಮೇಲೆ ಹಾರಿ ತಾಂಡವನೃತ್ಯವನ್ನು ಮಾಡಿದವು. ಆ ರಾಕ್ಷಸಕೃತ್ಯಕ್ಕೆ ಎಷ್ಟೋ ಜನರು ಜೀವಂತ ಶವಗಳಾದರು ಮತ್ತು ನೂರಾರು ಜನ ಅಂಗವಿಕಲರಾದರು. ವಿವಿಧ ರೀತಿಯ ಹಾನಿಗೊಳಗಾದ ಜನರ ಸಂಖ್ಯೆ ಒಟ್ಟು ೧,೩೬,೦೦೦. ಈ ಘಟನೆ ಸಂಭವಿಸಿ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಕಳೆದರೂ ಅಲ್ಲಿ ಹುಟ್ಟುತ್ತಿರುವ ಮಕ್ಕಳು ಇನ್ನೂ ವಿಕಲಾಂಗರೇ ಆಗಿರುತ್ತಾರಂತೆ. ಆ ನರಕಸದೃಶ ಘಟನೆಯಿಂದ ನಮ್ಮ ವಾತಾವರಣ ಕಲುಷಿತಗೊಂಡಿದ್ದಂತೂ ನಿಜ. ಭಾರತದಲ್ಲಿ ಸಂಭವಿಸಿದ ಭೋಪಾಲ್ ದುರಂತ ಮತ್ತು ರಷ್ಯಾದ ಚರ್ನೋಬಿಲ್ ದುರಂತಗಳೂ ಕೂಡ ಇದಕ್ಕೆ ಹೊರತಾಗಿಲ್ಲ.

ಆಧುನೀಕರಣದ ಪರಿಣಾಮವಾಗಿ ನಮ್ಮ ಜೀವನದ ಶೈಲಿಯೇ ಬದಲಾಗಿಬಿಟ್ಟಿದೆ. ನಾವು ಉಪಯೋಗಿಸುತ್ತಿರುವ ಉಪಭೋಗ ವಸ್ತುಗಳು ಕೂಡ ದಿನೇ ದಿನೇ ಹೆಚ್ಚುತ್ತಲೇ ಇವೆ. ಹೀಗಾಗಿ ಘನತ್ಯಾಜ್ಯ ವಸ್ತುಗಳ ಉತ್ಪತ್ತಿಯೂ ಕೂಡ ಹೆಚ್ಚಾಗುತ್ತಿದೆ. ಅಮೇರಿಕದ ನ್ಯೂಯಾರ್ಕ್ ಮಹಾನಗರ ಒಂದರಲ್ಲಿಯೇ ಪ್ರತಿದಿನ ೨೫,೦೦೦ ಟನ್ ಘನತ್ಯಾಜ್ಯ ವಸ್ತುಗಳು ಉತ್ಪತ್ತಿಯಾಗುತ್ತಿವೆ. ಭಾರತದ ಬೃಹತ್ ಮೆಟ್ರೋಪಾಲಿಟನ್ ನಗರಗಳು ಎನಿಸಿಕೊಂಡಿರುವ ದೆಹಲಿ, ಮುಂಬೈ, ಕೊಲ್ಕತಾ, ಹೈದರಾಬಾದ್, ಬೆಂಗಳೂರುಗಳಲ್ಲಿ ಪ್ರತಿವರ್ಷ ೩ ದಶಲಕ್ಷ ಟನ್ ಘನತ್ಯಾಜ್ಯ ವಸ್ತುಗಳು ಶೇಖರವಾಗುತ್ತಿವೆ. ಘನತ್ಯಾಜ್ಯ ವಸ್ತುಗಳ ಉತ್ಪತ್ತಿಯು ಪರಿಸರಮಾಲಿನ್ಯದ ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿಬಿಟ್ಟಿದೆ. ಏಕೆಂದರೆ ಇವು ಪರಿಸರವನ್ನು ಎಲ್ಲ ರೀತಿಯಲ್ಲೂ ಮಲಿನಗೊಳಿಸುತ್ತಿವೆ. ಇವುಗಳನ್ನು ದಹಿಸಿದರೆ ವಾಯುಮಾಲಿನ್ಯವಾಗುತ್ತದೆ; ತೆರೆದ ಪ್ರದೇಶದಲ್ಲಿ ಹಾಕುವುದರಿಂದ ಭೂಮಾಲಿನ್ಯ, ಜಲಮಾಲಿನ್ಯವಾಗುತ್ತದೆ; ಭೂಮಿಯ ಆಳದಲ್ಲಿ ಹೂತುಹಾಕಿದರೆ ಅಂತರ್ಜಲ ಮಲಿನವಾಗುತ್ತದೆ.

ಘನತ್ಯಾಜ್ಯ ವಸ್ತುಗಳಲ್ಲಿ ಪರಿಸರದ ಶತ್ರುವಾಗಿ ಪರಿಣಮಿಸಿರುವ ಪ್ಲಾಸ್ಟಿಕ್‌ನ ಪಾತ್ರ ಅಗಾಧವಾದದ್ದು. ಇದು ಜೈವಿಕವಾಗಿ ವಿಘಟನೆಗೊಳ್ಳದಿರುವ ವಸ್ತುವಾಗಿರುವುದರಿಂದ, ಮಾನವನಿಗೆ ಮತ್ತು ಮೂಕಪ್ರಾಣಿಗಳಿಗೆ ಕಂಟಕಪ್ರಾಯವಾಗಿ ಪರಿಣಮಿಸಿದೆ. ಪ್ಲಾಸ್ಟಿಕ್‌ನ ಪ್ರಯೋಗ ಮೂಕಪ್ರಾಣಿಗಳ ಮೇಲೆ ಪರಿಣಾಮ ಬೀರುವುದೇ ಹೆಚ್ಚು. ಉದಾಹರಣೆಗೆ ೧೯೭೭, ಜೂನ್ ತಿಂಗಳಿನಲ್ಲಿ ಒಂದು ಮೃಗಾಲಯದಲ್ಲಿದ್ದ ಬಿಳಿಜಿಂಕೆಯೊಂದು ಇದ್ದಕ್ಕಿದ್ದಂತೆ ಮರಣವನ್ನಪ್ಪಿತು. ಆ ಪ್ರಾಣಿಯ ಶವಪರೀಕ್ಷೆ ಮಾಡಿದಾಗ ಕಾಕತಾಳೀಯವೆಂಬಂತೆ ೪.೫ ಕಿ.ಗ್ರಾಂ. ಪ್ಲಾಸ್ಟಿಕ್ ಇತ್ತೆಂದು ಗೊತ್ತಾಯಿತು. ಒಂದು ಮನೆಯಲ್ಲಿ ಐದು ಎಮ್ಮೆ



ಕರುಗಳು ಒಂದೇ ದಿನ ಮರಣ ಹೊಂದಿದವು. ಕಾರಣ ಪ್ಲಾಸ್ಟಿಕ್ ಸೇವನೆ. ಈ ಪ್ಲಾಸ್ಟಿಕ್‌ನ ಬಳಕೆ ಇಂದು ಮಿತಿ ಮೀರಿದೆ. ಹಾಲಿನಿಂದ ಹಿಡಿದು ಬಹುತೇಕ ಜನೋಪಯೋಗಿ ವಸ್ತುಗಳು ಪ್ಲಾಸ್ಟಿಕ್‌ನಿಂದಲೇ ಕೂಡಿವೆ. ಇದು ವಿಷಾದದ ಸಂಗತಿಯಲ್ಲವೇ?

ಸಂಪೂರ್ಣವಾಗಿ ವಾಣಿಜ್ಯೀಕರಣಗೊಂಡಿರುವ ಮಾನವನು ತ್ವರಿತವಾಗಿ ಫಸಲನ್ನು ಪಡೆದು ಲಾಭಗಳಿಸುವ ಉದ್ದೇಶದಿಂದ ಆಧುನಿಕ ಕೀಟನಾಶಕಗಳು, ರಸಗೊಬ್ಬರಗಳನ್ನು ವಿಪರೀತ ಬಳಸಿ ಭೂತಾಯಿಯನ್ನು ನಿತ್ರಾಣಗೊಳಿಸಿದ್ದಾನೆ. ಇಂತಹ ರಾಸಾಯನಿಕ ಪದಾರ್ಥಗಳು ಮಳೆಯ ನೀರಿನ ಜೊತೆ ಸೇರಿಕೊಂಡು, ಜಲಮೂಲಗಳಿಗೆ ಸೇರಿ ಮಾಲಿನ್ಯವನ್ನು ಮಾಡುತ್ತಿವೆ. ಇದರ ಪರಿಣಾಮವೆಂಬಂತೆ ಭಾರತದಲ್ಲಿ ಫೈಲಾರಿಯಾಸಿಸ್ (Filariasis) ಹಾಗೂ ಜಪಾನ್‌ನಲ್ಲಿ ಮೀನಮಾಟದಂತಹ (Minamata) ರೋಗಗಳು ಕಂಡುಬಂದಿವೆ. ಫೈಲಾರಿಯಾಸಿಸ್ ರೋಗದಿಂದ ೧೯೭೭, ಡಿಸೆಂಬರ್ ತಿಂಗಳೊಂದರಲ್ಲಿಯೇ ೫೦೦ ಜನ ಮಕ್ಕಳು ವಿಕಲಾಂಗರಾದರು. 'ಪಿಯರ್‌ಸನ್' ಎಂಬ ವಿಜ್ಞಾನಿಯ ಪ್ರಕಾರ ಅಭಿವೃದ್ಧಿಶೀಲ ದೇಶಗಳಲ್ಲಿ ಪ್ರತಿ ವರ್ಷ ೧೦,೦೦೦ ಕ್ಕೂ ಅಧಿಕ ಜನರು ಕೀಟನಾಶಕಗಳ ಪ್ರಭಾವದಿಂದಾಗಿ ಸಾಯುತ್ತಿದ್ದಾರೆ.

ಮಾನವ ಬುದ್ಧಿಜೀವಿ. ಆತ ಬಾಹ್ಯಾಕಾಶಕ್ಕೆ ಲಗ್ಗೆ ಹಾಕಿರುವುದು ಸೋಜಿಗದ ಸಂಗತಿ. ಆದರೆ ಅಲ್ಲಿಯೂ ಕೂಡ ಈತ ತನ್ನ ಹಳೇ ಚಾಳಿಯನ್ನು ಮುಂದುವರೆಸಿದ್ದಾನೆ. ಕಳೆದ ೪೦ ವರ್ಷಗಳಿಂದ ಮನುಷ್ಯನು ಬಾಹ್ಯಾಕಾಶವನ್ನು ಕಲುಷಿತಗೊಳಿಸುತ್ತಿದ್ದು, ಈವರೆಗೆ ೨,೫೦೦ ಬಾಹ್ಯಾಕಾಶ ನೌಕೆಗಳನ್ನು ಹಾರಿಬಿಟ್ಟಿದ್ದಾನೆ. ಇದರಿಂದಾಗಿ, ಬಾಹ್ಯಾಕಾಶದಲ್ಲಿ ೬ ಲಕ್ಷ ಟನ್‌ಗಿಂತ ಹೆಚ್ಚು ತ್ಯಾಜ್ಯವಸ್ತುಗಳು ಸೇರಿಕೊಂಡಿವೆ ಎಂದು ಕಂಡುಹಿಡಿಯಲಾಗಿದೆ. ಬಾಹ್ಯಾಕಾಶದಲ್ಲಿನ ವಿವಿಧ ಪ್ರಯೋಗಗಳಿಗೆ ಬಳಸಿದ ರಾಸಾಯನಿಕ ವಸ್ತುಗಳಿಂದ ವಿಕಿರಣಮಾಲಿನ್ಯ ಉಂಟಾಗುತ್ತಿದೆ.

ಇಂಗ್ಲಿಷ್ ಸಾಹಿತ್ಯದ ಕವಿಯೊಬ್ಬ "Five ways to kill a man" ( ಒಬ್ಬ ಮನುಷ್ಯನನ್ನು ಕೊಲ್ಲುವ ಐದು ದಾರಿಗಳು)